# Smile Please Creations

*for every occasion, custom & handmade*

VOL: 9 DECEMBER 2025

Subscribe

WELCOME TO OUR

# *Monthly Newsletter*

## Editorial

Smile Please Creations wishes you all a very happy, peaceful, healthy and prosperous New Year 2026!

## Christmas Tree Decorations





**Handpainted MDF cutouts**





**Acrylic**
**Stained with Solvent based Glass Colour**

## In this newsletter:


- Product Gallery - Page 2
- ರೀತಿ- ನೀತಿ - Page 3
- ಕಲೆ-ನೆಲೆ - Page 4, 5
- Dancing Steps - Page 6
- Puzzle Time - Page 7
- Winners & Ans for November month's puzzles - Page 8
- Boggle Rules - Page 9

# Product Gallery

## Mini Canvas Painting with Easel Stand









# ರೀತಿ- ನೀತಿ

## ಕಥಾ ಮಾಲಿಕೆ-9

ಮಕ್ಕಳಾ, ನಿಮಗೆ ಪರೀಕ್ಷೆ ಹತ್ತಿರ ಬಂತು ಅಂದರೆ ತಲೆ ಬಿಸಿ ಆಗುತ್ತದೆ. ಏನನ್ನು ಓದಬೇಕು? ಹೇಗೆ ಓದಬೇಕು? ಎಂದೆಲ್ಲಾ ಸಂದೇಹ ಕಾಡುತ್ತದೆ ಅಲ್ಲವೇ?
ಈ ಕಥೆ ಕೇಳಿದರೆ ನಿಮಗೆ ಓದೋದು ಹೇಗೆ ಎಂದು ಗೊತ್ತಾಗುತ್ತದೆ.
ಒಮ್ಮೆ ಗಡಿಯಾರಕ್ಕೆ ತನಗಿರುವ ಎರಡು ಕೈಗಳಲ್ಲಿ ಕೆಲಸ ಮಾಡುವುದು ಕಠಿಣವೆನಿಸಿತು. ಆದ್ದರಿಂದ ಸೆಕೆಂಡಿನ ಮುಳ್ಳನ್ನು ನೌಕರಿಗೆ ಸೇರಿಸಿಕೊಂಡಿತು. ಸೆಕೆಂಡಿನ ಮುಳ್ಳು ಬಹಳ ಉತ್ಸಾಹದಿಂದ ತನ್ನ ಕೆಲಸವೇನೆಂದು ಕೇಳಿತು. ಗಂಟೆಯ ಮುಳ್ಳು ಒಂದು ಗಂಟೆಯಷ್ಟು ಚಲಿಸುವ ಸಮಯದಲ್ಲಿ ನಿಮಿಷದ ಮುಳ್ಳು ಒಮ್ಮೆ ನನ್ನ ಒಂದು ಸುತ್ತು ಹಾಕುತ್ತದೆ. ನಿಮಿಷದ ಮುಳ್ಳು ಒಂದು ಚಲನೆ ಚಲಿಸುವುದರಲ್ಲಿ ನೀನು ನನ್ನ ಒಂದು ಸುತ್ತು ಸುತ್ತಬೇಕು ಅಷ್ಟೆ! ಎಂದಿತು. ಒಂದು ನಿಮಿಷ ಮೌನದ ನಂತರ ಸೆಕೆಂಡಿನ ಮುಳ್ಳು ಹೇಳಿತು. ಹಾಗಾದರೆ ಒಂದು ನಿಮಿಷದಲ್ಲಿ ನಾನು ೬೦ ಬಾರಿ, ಒಂದು ಗಂಟೆಯಲ್ಲಿ ೩೬೦೦ ಬಾರಿ, ಒಂದು ದಿನದಲ್ಲಿ ಅಬ್ಬಬ್ಬಾ -- ಅಷ್ಟೊಂದು ಸಾರಿ ಸಾಧ್ಯವೇ ಇಲ್ಲ ಎಂದಿತು. ಆಗ ಗಡಿಯಾರ ಹೇಳಿತು. ನೀನು ಒಂದು ಬಾರಿಗೆ ಒಂದೇ ಚಲನೆ ಮಾಡಬೇಕು. ಒಟ್ಟಿಗೆ ಮಾಡಬೇಕಿಲ್ಲ ಅಲ್ಲವೇ, ಎಂದಿತು. ಆಗ ಸೆಕೆಂಡಿನ ಮುಳ್ಳಿಗೆ ಕೆಲಸ ಸುಲಭವೆನಿಸಿತು. ಕೆಲಸಕ್ಕೆ ಹಾಜರಾಯಿತು, ಅಚ್ಚುಕಟ್ಟಾಗಿ ಕೆಲಸ ಮಾಡಿತು. ಹಾಗೆಯೇ ನೀವು ಸಹ ಯಾವುದಾದರೂ ಒಂದೇ ಪುಸ್ತಕವನ್ನು ಓದಲು ಅಥವಾ ಒಂದೇ ಪಾಠವನ್ನು ಕಲಿಯಲು ಪ್ರಾರಂಭಿಸಿ. ಆಗ ಮನಸ್ಸು ಹಗುರವೂ ಆಗುತ್ತದೆ. ಏಕಾಗ್ರತೆಯೂ ಮೂಡುತ್ತದೆ ಹಾಗೂ ಕಲಿತದ್ದು ಮರೆಯುವುದಿಲ್ಲ.

**ಈಗಿನಿಂದಲೇ ಹೀಗೆ ಮಾಡುತ್ತೀರಲ್ಲವೇ?**

**ಶ್ರೀಲತಾ, ಹಾಸನ**

# ಈ ತಿಂಗಳ ವಿಚಾರ

ಒಡಲೊಳಡಗಿದ ವಿದ್ಯೆ ಒಡಗೂಡಿ ಬರುತಿರಲು ಕಳ್ಳರು,
ನೃಪರದನು ಪಡೆಯಲೆಂತೆಂದ ಸರ್ವಜ್ಞ
ಆದ್ದರಿಂದ ಯಾರೂ ಕದಿಯಲಾರದ ವಿದ್ಯೆ ಎಂಬ ಸಂಪತ್ತನ್ನು
ಗಳಿಸಲು ನಿಮ್ಮ ಸಮಯವನ್ನು ಮೀಸಲಿಡಿ.

# <u>ಕಲೆ-ನೆಲೆ</u>

## ರಂಗೋಲಿ ರಂಗೋಲಿ


ರಂಗೋಲಿ, ಬಣ್ಣ ಬಣ್ಣದ ರಂಗೋಲಿ,
ಮನೆ ಒಳಗೆ-ಹೊರಗೆ ಬೆಳಗುವ ರಂಗೋಲಿ

ಈ ಬಾರಿ ಕಲೆ ನೆಲೆ ಸರಣಿಯಲ್ಲಿ ರಂಗೋಲಿಯ ಬಗ್ಗೆ ಸ್ವಲ್ಪ ಮಾತನಾಡೋಣ
ನಾವೀಗ ಮಾರ್ಗಶಿರ ಮಾಸದ ಮಧ್ಯದಲ್ಲಿ ಬರುವ ಧನುರ್ಮಾಸದಲ್ಲಿ ಕಾಲಿಟ್ಟಿದ್ದೇವೆ. ಧನುರ್ಮಾಸವನ್ನು ಶೂನ್ಯ ಮಾಸ ಎಂತಲೂ ಕರೆಯುತ್ತಾರೆ. ಶ್ರೀಮನ್ನಾರಾಯಣ ಭೂಲೋಕದಲ್ಲಿ ಈ ತಿಂಗಳಲ್ಲಿ ಸಂಚಾರಕ್ಕೆ ಬರುತ್ತಾರೆ. ನಾರಾಯಣನಿಗೆ ತುಂಬಾ ಪ್ರಿಯವಾದ ಮಾಸ ಧನುರ್ಮಾಸ. ಧನುರ್ಮಾಸದಲ್ಲಿ ನಾವು ಬ್ರಾಹ್ಮಿ ಮುಹೂರ್ತದಲ್ಲಿ ಪೂಜೆ ಮಾಡಿದರೆ ನಮ್ಮ ಎಲ್ಲಾ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಬಹುದು ಎಂಬ ನಂಬಿಕೆ ಇದೆ. ಹಾಗಾಗಿ ಈ ತಿಂಗಳಲ್ಲಿ ರಂಗೋಲಿಯ ಮಹತ್ವ ಇನ್ನೂ ಹೆಚ್ಚಾಗಿರುತ್ತದೆ. ಏಕೆಂದರೆ ಬ್ರಾಹ್ಮಿ ಮುಹೂರ್ತದಲ್ಲಿ ಪೂಜೆಗೆ ಮೊದಲು ದೇವಸ್ಥಾನದಲ್ಲಾಗಲಿ, ಮನೆಗಳ ಮುಂದೆ ಆಗಲಿ, ದೊಡ್ಡ ದೊಡ್ಡ ರಂಗವಲ್ಲಿ ಹಾಕಿ ಅಲಂಕರಿಸಿರುತ್ತಾರೆ. ಹಾಗಾಗಿ ರಂಗವಲ್ಲಿಗೆ ಈ ತಿಂಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆ. ರಂಗೋಲಿ ಎಂದ ತಕ್ಷಣ ಹಲವಾರು ಪ್ರಕಾರ ನೆನಪಿಗೆ ಬರುತ್ತದೆ.

ಅಕ್ಕಿ ಹಿಟ್ಟಿನ ರಂಗೋಲಿ
ರಂಗೋಲಿ ಪುಡಿ ರಂಗೋಲಿ
ಬಣ್ಣದ ರಂಗೋಲಿ
ಗೆರೆ ರಂಗೋಲಿ
ಜಡೆ ರಂಗೋಲಿ

ಹೀಗೆ ಹಲವಾರು ವಿಧಗಳಿಂದ ಮನೆ ಒಳಗೆ, ಹೊರಗೆ ನಾವು ಅಲಂಕರಿಸುತ್ತೇವೆ. ಕೆಲವು ಬಾರಿ ಇದೇ ರಂಗೋಲಿಗಳನ್ನು ಬಣ್ಣದ ಹೂವುಗಳಿಂದ ಅಲಂಕರಿಸುತ್ತೇವೆ. ಈ ರೀತಿ ಮನೆಯ ಮುಂದೆ ರಂಗೋಲಿ ಇದೆ ಎಂದರೆ ಅದು ಶುಭದ ಸೂಚಕ, ಹಾಗೂ ಎಲ್ಲರ ಮನಸ್ಸಿಗೂ ಮುದ ತರುತ್ತದೆ. ಮನೆಯ ಗೃಹಿಣಿಯಾಗಿ ಬೆಳಿಗ್ಗೆ ಎದ್ದ ತಕ್ಷಣ ಬಾಗಿಲು ಸಾರಿಸಿ ಅನಂತರ ಮನೆ ಕೆಲಸ ಶುರು ಮಾಡುತ್ತಿವಿ. ಅಲ್ಲವೇ? ಅದು ನಮ್ಮ ಭಾರತೀಯ ಪರಂಪರೆ. ಇತ್ತೀಚಿನ ದಿನಗಳಲ್ಲಿ ಹಲವಾರು ಬಗೆಯ ಶಾಶ್ವತವಾಗಿ ಇಟ್ಟುಕೊಳ್ಳಲು ಸಾಧ್ಯವಾಗುವಂತಹ ರಂಗೋಲಿಗಳು ಹೆಚ್ಚಾಗಿವೆ. ನವರಾತ್ರಿ, ದೀಪಾವಳಿ, ಗಣೇಶನ ಪೂಜೆ, ಗೌರಿ ಪೂಜೆಗಳಲ್ಲಿ ಮಂಗಳಾರತಿ ಸಮಯದಲ್ಲಿ ಕೈಯಿಂದ ನಿರ್ಮಿಸಿದ ರಂಗೋಲಿಗಳಿಂದ ಅಲಂಕರಿಸಿ ಎಲ್ಲರಿಗೂ ತೋರಿಸಿ ನಾವು ಕೂಡ ಸಂತೋಷಪಡುತ್ತೇವೆ.

O H P Sheet ಅನ್ನು ರಂಗೋಲಿಯ ಆಕಾರದಲ್ಲಿ ಕತ್ತರಿಸಿ ಬಣ್ಣ ಹಾಕಿಲೇಸ್, ಬಣ್ಣದ  ಸ್ಟೋನ್ ಇವುಗಳಿಂದ ಅಲಂಕರಿಸಬಹುದು.







O H P Sheet ನಲ್ಲಿ ಒಂದೇ ರಂಗೋಲಿಯನ್ನು ಹಲವು ತುಂಡುಗಳಾಗಿ ಮಾಡಿ ಅಲಂಕರಿಸಿ ಜೋಡಿಸಿಟ್ಟು ಪೂಜೆಯ ನಂತರ ತೆಗೆದಿಡಬಹುದು. ಹಬ್ಬ ಹರಿದಿನಗಳಲ್ಲಿ ಗೃಹಿಣಿಯರಿಗೆ ಕುಳಿತು ರಂಗೋಲಿ ಹಾಕಲು ಪುರುಸೊತ್ತಿಲ್ಲದಾಗ ಈ ರೀತಿಯ ರಂಗೋಲಿಗಳು ಉಪಯೋಗಕ್ಕೆ ಬರುತ್ತದೆ ಇವುಗಳು ಮಾರ್ಕೆಟ್ನಲ್ಲಿ ಬೇಕಾದ ಹಾಗೆ ದೊರೆಯುತ್ತದೆ. ಸ್ವತಃ ನಾವೇ ಮಾಡಿ ಮನೆಯಲ್ಲಿಟ್ಟುಕೊಂಡರೆ ಅದರ ಸಂತೋಷವೇ ಬೇರೆ ಅಲ್ಲವೇ?

ಬೇಕಾದ ಸಾಮಗ್ರಿಗಳು

OHP Sheet-2

ಇಡ್ಲಿಮಣಿಗಳು, ಬಣ್ಣದ ಸ್ಟೋನ್, ಬಾಲ್ ಚೈನ್, ಗೋಲ್ಡನ್ ಸ್ಟೋನ್ ಚೈನ್ ಇತ್ಯಾದಿ.



ಚುಕ್ಕಿ ಚುಕ್ಕಿ ಸೇರಿ ಸೇರಿಸಿ
ಎಲ್ಲೋ ಎಲ್ಲೋ ಕೂಡಿದ್ದಾರೆ
ನೂರಾರು ತಿರುವಿಂದ ಏನೇನೋ ಅನುಬಂಧ



ಪುಷ್ಪ ನಾಗಭೂಷಣ
ಸಂಪರ್ಕ: 9937768618
ಹಾಸನ

# Dance of the Guardians



Deep within the rural heartlands of Southern Karnataka, a ritualistic practice has survived since the Vedic period. It is a special dance form as it is believed to be a part of Shaktism , Vaishnavism and Shaivism. It is known that Somana kunita artists belonged to the Shakthi panta in the olden days and then the masks represent the Vaishnavaite and Shaivaite tradition. Somana Kunitha, is not merely a performance, it is the “Dance of the Guardians” a vibrant bridge between the physical and spiritual worlds. In Karnataka each village has a native deity usually a goddess, she is accompanied by guardians, the protectors who ward off the evils to safeguard the village. These guardians are called as Somas and their dance is known as Somana kunita. During festivals like Ugadi and Deepawali, these deities come to life through dancers wearing elaborate masks that are three times the size of a human face. Another beautiful element is the ‘Banka’ – head gear that is decorated with colourful sarees and flowers. Adorned by these masks and Banka, the artists transform into celestial beings. It is a ritualistic dance done to appease the deity.



The masks themselves are masterpieces of symbolic contrast. The yellow mask (Veerabhadra) represents Shaivism and a fierce masculine energy, carved from the Indian Fig tree. The red mask (Vatapi) represents Vaishnavism and a benevolent femininity, carved from the Bhutala tree. The artist wears the masks and performs the dance upto 5 hours without a break. There are instances of the divine possession that many artists assert that they have no memory of the steps performed as they believe the guardian spirit takes over their body to performance the dance. The two popular masks have a great significance, they denote the two faces of the universe, masculinity and femininity. The yellow symbolises the sperm of a man while red symbolises the menstrual blood of a woman. Ironically, though red symbolises women, the same female isn’t allowed to touch the mask nor perform this dance.

Somana kunita stands as far more than just a dance, it is a profound and vibrant treasure of Karnataka’s cultural and spiritual heritage. Its unique blend of devotional fervour, ancestral memory, and theatrical artistry ensures its continued relevance in the modern age.

**Vaishnavi J Koundinya**

## Boggle Time

| | | | |
|---|---|---|---|
| T | M | D | O |
| E | R | A | H |
| L | E | T | S |
| Y | L | B | I |

**Point calculation**
5 letters - 1 point
6 letters - 2 points
7 letters - 3 points
8 letters - 4 points
9 letters - 9 points
10 letters - 10 points

Rules of the game -Form as many words as possible --> Rules given in next page

Send words with 5 letters and more
The names of 2 highest scorers will be announced in the next newsletter

## ಈ ಬಾರಿಯ ಸಮಸ್ಯೆ

I am a word of two syllables. On my first people sleep and my second is a measure. I am light and soft. I wipe you, drape you and beautify you.
**Who am I?**

**newsletter@smilepleasecreations.com**
**+91 6366684838**

**Send in your answers on email or WhatsApp before 10th January 2026**

**Link to November Newslettter**

**Follow us on**
YouTube
@SmilePleaseCreations5
@Smile Please Creations

query@smilepleasecreations.com

# Previous Months Answers

## Boggle Time

Please note that all the possible words are not listed here. Our focus in mainly on the longer words

master
eastern
western
strap
stare
heater
mater
parts
partner
rates
rater
tease
seater

stane
steam
stear
smear
shear
sweat
sweater
tears
mates
eastern
pants
tanner
aster

teams
earnest
stern
entrap
parser
reseat
wester
erase
wheat
parser
reams
serum
swear
rents




## Winner

Padma Bharadwaj - 45 points

| | | | |
|---|---|---|---|
| H | W | R | P |
| E | S | T | A |
| M | A | E | N |
| V | U | R | N |

## ಹಿಂದಿನ ತಿಂಗಳ ಸಮಸ್ಯೆಗೆ ಉತ್ತರ

ಯಾವುದು ಮೂಲೆಯಲ್ಲಿ ಕುಳಿತು ಪ್ರಪಂಚವನ್ನೆಲ್ಲ ಸುತ್ತುತ್ತದೆ?

ಅಂಚೆ ಚೀಟಿ

ನಾವು ಯವುದೇ ಪತ್ರವನ್ನು ಅಂಚೆಯ ಮೂಲಕ ಕಳುಹಿಸಲು, ಕಳುಹಿಸಬೇಕಾದ ಸ್ಥಳಕ್ಕೆ ನಿರ್ಧಾರಿತ ಅಂಚೆಚೀಟಿಯನ್ನು ಲಗತ್ತಿಸಬೇಕು. ಆ ಅಂಚೆಚೀಟಿಯನ್ನು ನಾವು ಕಾಗದದ ಬಲ ಮೂಲೆಯಲ್ಲಿ ಅಂಟಿಸುತ್ತೇವೆ. ಅದು ಅಲ್ಲೇ ಕುಳಿತು ವಿಶ್ವಪರ್ಯಟನೆ ಮಾಡುತ್ತದೆ.





## Winner

Padma Bharadwaj

# Boggle Rules

Words must be at least five letters long and formed by connecting adjacent letters horizontally, vertically, or diagonally. Each letter can only be used once in a word, and no letter cube can be jumped over.

## CORRECT




## WRONG

